**ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂಡಾಧಿಕಾರಿಗಳು, ಬನಹಟ್ಟಿ**

**ಸಿ.ಸಿ.ನಂ.797/2020**

ಪಿ.ಡಬ್ಲ್ಯು- 1

ಫಿರ್ಯಾದಿದಾರರನ್ನು ದಿನಾಂಕ 23-01-2024 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

**ಪಾಟೀಸವಾಲುಃ ಆರೋಪಿ ಪರ ಶ್ರೀ.ಎಸ್ ವೈ ಬಿ ವಕೀಲರಿಂದ :-**

ನನಗೆ ಇನ್ನೊಂದು ಹೆಸರಿದ್ದು ಮಹಾದೇವ ಎಂತಲೂ ಕರೆಯುತ್ತಾರೆ. ನನ್ನ ಶಾಲಾ ದಾಖಲೆಗಳಲ್ಲಿ ನನ್ನ ಹೆಸರು ಮಾದಪ್ಪ ಎಂದು ಇದ್ದು, ನನ್ನ ಆಸ್ತಿ ದಾಖಲೆಗಳಲ್ಲಿ ಮತ್ತು ಉಳಿದ ದಾಖಲೆಗಳಲ್ಲಿ ನನ್ನ ಹೆಸರು ಮಹಾದೇವ ಅಂತಾ ಇದ್ದು, ನನಗೆ ತುಂಬಾ ತೊಂದರೆ ಆಗಿದ್ದ ಕಾರಣ ಸರಕಾರದಿಂದ ಗೆಜೆಟ್ ಮಾಡಿಸಿ ನನ್ನ ಹೆಸರನ್ನು ಮಾದಪ್ಪ ಅಲಿಯಾಸ್ ಮಹಾದೇವ ಎಂದು ಮಾಡಿಸಿಕೊಂಡಿದ್ದೇನೆ. ಅದಕ್ಕೆ ಸಂಬಂಧಿಸಿದ ದಾಖಲೆಯನ್ನು ಹಾಜರುಪಡಿಸಿಲ್ಲ. ಬೇಕಿದ್ದರೆ ಹಾಜರುಪಡಿಸಿದ್ದೇನೆ. ನನ್ನ ಎರಡು ಹೆಸರುಗಳು ಇರುವ ದಾಖಲೆಗಳನ್ನು ಹಾಜರುಪಡಿಸುತ್ತೇನೆ.

ನನಗೆ ಕನ್ನಡ ಮತ್ತು ಆಂಗ್ಲ ಭಾಷೆ ಓದಲು ಬರೆಯಲು ಬರುತ್ತದೆ. ನಾನು ಕೆಲಸ ಮಾಡುತ್ತಿದ್ದ ಶಿಕ್ಷಣ ಸಂಸ್ಥೆಯಾದ ಎಸ್ ಟಿ ಸಿ ಕಾಲೇಜಿನ ಮಾಸ್ಟರ್ ರೋಲನಲ್ಲಿ ಗುರುಪಾದ ಜುನಾಯಕರ್ ಇವರ ಸಿ.ಎಲ್. ನ್ನು ಎಸ್. ಎಲ್. (ಸ್ಪೇಶಲ್ ಲೀವ್)ಅಂತಾ ಹಿಂದಿನ ದಿನಾಂಕಕ್ಕೆ ಹೋಗಿ ನಾನು ಬದಲಾಯಿಸಿದ್ದೆ ಎಂದರೆ ಸರಿಯಲ್ಲ. ದಿನಾಂಕ 01-06-2017 ರಿಂದ 19-02-2018 ರವರೆಗೆ ನಾನು ಸದರಿ ಕಾಲೇಜಿನಲ್ಲಿ ಪ್ರಿನ್ಸಿಪಾಲ್ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ. ನಾನು ದಿನಾಂಕ 31-10-2018 ರಂದು ನಿವೃತ್ತಿ ಹೊಂದಿದೆ. ನಾನು ಎಕೋನಾಮಿಕ್ಸ ತೆಗೆದುಕೊಳ್ಳದ ಕಾರಣ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಆಗಿದ್ದರಿಂದ ಅದು ಇನ್ನು ಕಡಿಮೆ ಆಗುವುದನ್ನು ತಪ್ಪಿಸಲು ದಿನಾಂಕ 19-02-2018 ರಂದು ಪಿನ್ಸಿಪಾಲ್ ಕೆಲಸದಿಂದ ನಿವೃತ್ತಿ ಹೊಂದಿ ಶಿಕ್ಷಕನಾಗಿ ಸದರಿ ಸಂಸ್ಥೆಯಲ್ಲಿ ನನ್ನ ಕೆಲಸ ಮುಂದುವರೆಸಿದೆ. ಅದರ ದಾಖಲೆ ಒದಗಿಸುತ್ತೇನೆ. ಹಾಗೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಮಾಡಿದ್ದ ಫೋರಜರಿ ಕೆಲಸ ಗೊತ್ತಾಗುತ್ತದೆ ಎಂದು ಪಿನ್ಸಿಪಾಲ್ ಹುದ್ದೆಗೆ ರಾಜೀನಾಮೆ ನೀಡಿದೆ ಎಂದರೆ ಸರಿಯಲ್ಲ. ನನ್ನ ಮೇಲೆ ಸುರೇಂದ್ರಬಾಬು ಸುಗಮದ್ ಇವರು ನನ್ನ, ಆರೋಪಿ ಮತ್ತು ಇನ್ನು ಮೂರು ಜನರ ಮೇಲೆ ಕ್ರಿಮಿನಲ್ ಕೇಸ್ ನಂ.1644/2015 ನ್ನು ದಾಖಲಿಸಿದ್ದರು. ಅದರಲ್ಲಿ 1 ನೇ ಆರೋಪಿ ನಾನೇ ಇದ್ದೇನೆಂದರೆ ಇರಬಹುದು. ಸಂಗಮೇಶ್ ಮಟೋಳಿ ಇವರು ನಿಯಮದಂತೆ ಪ್ರಾಚಾರ್ಯರಾಗಬೇಕಿತ್ತು,

ಆದರೆ ಅವರ ಬದಲಾಗಿ ಸುಗಮದ್ ಇವರನ್ನು ಪ್ರಾಚಾರ್ಯರನ್ನಾಗಿ ಮಾಡಿದ್ದರು, ಅದನ್ನು ನಾವು 5 ಜನ ವಿರೋಧಿಸಿ ಪತ್ರ ಕೊಟ್ಟಿದ್ದಕ್ಕೆ ಅದನ್ನೇ ಮೂಲವಾಗಿ ಇಟ್ಟುಕೊಂಡು ಅವರು ಕ್ರಿಮಿನಲ್ ಕೇಸ್ ದಾಖಲಿಸಿದ್ದರು. ಅದರ ದಾಖಲೆಗಳನ್ನು ಹಾಜರುಪಡಿಸುತ್ತೇನೆ. ಈ ಪ್ರಕರಣದ ಆರೋಪಿ ಸದರಿ ಕೇಸನಲ್ಲಿಆರೋಪಿಯಾಗಿರಲಿಲ್ಲ ಎಂದರೆ ಸರಿಯಲ್ಲ. ಸದರಿ ಕೇಸನಲ್ಲಿ ನಾವು ತಪ್ಪೊಪ್ಪಿಕೊಂಡಿದ್ದರಿಂದ ಬಿಡುಗಡೆ ಆಗಿದ್ದೆವು ಎಂದರೆ ಸಾಕ್ಷಿ ಸರ್ವೋಚ್ಛ ನ್ಯಾಯಾಲಯದ ಆದೇಶದ ಮೇರೆಗೆ ನಾವು ಲೋಕ್ ಅದಾಲತನಲ್ಲಿ ತಪ್ಪನ್ನು ಒಪ್ಪಿಕೊಂಡಿದ್ದೆವು. ನಿಸಿ-1ರ ದಾಖಲೆಯನ್ನು ನಾನು ಕಾನೂನುಬಾಹೀರವಾಗಿ ಗುರುಪಾದ ಜುನಾಯಕರ್ ಇವರಿಂದ ತೆಗೆದುಕೊಂಡಿದ್ದೇನೆಂದರೆ ಸರಿಯಲ್ಲ. ಆರೋಪಿ ನಾನು ತೆಗೆದುಕೊಂಡಿದ್ದ ಲಂಚವನ್ನು ಎಸ್. ಟಿ. ಸಿ. ಕಾಲೇಜಿನ ಚೇರಮನ್ ಇವರಿಗೆ ತಿಳಿಸಿದ್ದು, ಯಾವುದೇ ಪ್ರಕಟಣೆ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ದಾಖಲೆಗಳು ಸಾಮಾನ್ಯವಾಗಿ ಎಲ್ಲರಿಗೂ ಸಿಗುವಂತಹದ್ದು ಅಲ್ಲ ಮತ್ತು ಅರ್ಜಿ ಸಲ್ಲಿಸಿ ಪಡೆಯಬೇಕಾಗುತ್ತದೆ ಎಂದರೆ ಸರಿ. ನಾನು ಅರ್ಜಿ ಸಲ್ಲಿಸಿ ಪಡೆದಿದ್ದೇನೆ.

ಮುಂದುವರೆದ ಪಾಟೀಸವಾಲಿಗೆ ವಕೀಲರು ಸಮಯಾವಕಾಶ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ನಿರ್ದೇಶನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇ.ಕೇ.ಸರಿ ಅದೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂ., ಬನಹಟ್ಟಿ.